SFS 707 and Surrounding area in ಕಡತದ ಸಂಖ್ಯೆ:----------

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

25) **ವಿಷಯ:-** Improvements to drains at SFS 707 and surrounding area in ward no:03.

****

26) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಟ್ಟೂರು, ವಾರ್ಡ್ ನಂ-03 ರ ವ್ಯಾಪ್ತಿಯಲ್ಲಿನ Improvements to drains at SFS 707 and surrounding area in ward no:03ಸಾರ್ವಜನಿಕರು ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರುಗಳಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರು ಸದರಿ ಕಾಮಗಾರಿಯನ್ನು **P-3739 Spepcial Development Works** ಅನುದಾನದಡಿಯಲ್ಲಿ ಸೇರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಿರುತ್ತಾರೆ.

27) ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2021 ನೇ ಸಾಲಿನ **P-3739 Spepcial Development Works** ಅನುದಾನದಡಿಯಲ್ಲಿ ರೂ.76.00ಲಕ್ಷಗಳಿಗೆ ಹಾಗೂ ಅಂದಾಜು ಪಟ್ಟಿಯನ್ನು PW.P. IWTD SR of 2018-19 and approved Data Rate of Bangalore Circle ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

28)
1) ಸಾಮಾನ್ಯ ಮಣ್ಣಿನ ಅಗೆತ,
2) ಸಿ.ಸಿ.1:3:6 ಅಳವಡಿಸುವುದು.
3) ಸಿ.ಸಿ.ಎಂ.20 ನ್ನು ಅಳವಡಿಸುವುದು.
4) ಟಿ.ಎಂ.ಟಿ ಸ್ಟೀಲ್‌ನ್ನು ಅಳವಡಿಸುವುದು.
5) ಸಿ.ಸಿ.1:2:4 ನ್ನು ಅಳವಡಿಸುವುದು.
6) ಕಲ್ವರ್ಟ್‌ಗಳನ್ನು ಅಳವಡಿಸುವುದು.

29) ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಈ ಕಾಮಗಾರಿಗೆ **P-3739 Spepcial Development Works** ಅನುದಾನದಡಿಯಲ್ಲಿ 003-21-000040 ಕಾಮಗಾರಿಯ ಸಂಕೇತ ದೊರೆತಿದ್ದು. ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರ
ಯಲಹಂಕ ವಿಭಾಗ (ರಸ್ತೆ ಮೂಲ ಸೌಕರ್ಯ)
ಬಿ.ಬಿ.ಎಂ.ಪಿ. ಬೆಂಗಳೂರು-106

ಸ.ಅ (ವಾರ್ಡ್ ನಂ:03)

30) ತಿ.ಅ(ಯು.ಬಿ)

ಕಂಡಿಕೆ (ಜ) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2020-21ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-3739 (Special development works) ಅನುದಾನದಡಿ ಮಂಜೂರಾಗಿರುವ ವಾರ್ಡ್ ನಂ:03ರ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳು ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್ ದರಪಟ್ಟಿಯನ್ನು ಅನುಸರಿಸಿ ರೂ.76.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಈಗಾಗಲೇ ಕಾಮಗಾರಿ ಸಂಕೇತ:003-21-000040 ದೊರೆತಿದ್ದು, ಸದರಿ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶ ಕೋರಿ ಸಲ್ಲಿಸಿದೆ.

30/09/2020

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(31) ಮುಖ್ಯ ಲೆಕ್ಕಾಧಿಕಾರಿಗಳವರಿಗೆ

ಕಂಡಿಕೆ 25ರಿಂದ 30ರ ವರೆಗೆ ವಿವರಿಸಿರುವಂತೆ ಪ್ರಸ್ತಾಪಿತ ಕಾಮಗಾರಿಯು 2020-21ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-3739 ರಡಿಯಲ್ಲಿ ವಾರ್ಡ್-3ಕ್ಕೆ ರೂ 76.00ಲಕ್ಷಗಳ ಅನುದಾನದಲ್ಲಿ ಕೈಗೊಳ್ಳಲು ಜಾಬ್ ಸಂಕೇತ ದೊರೆತಿದ್ದು ಸದರಿ ಅನುದಾನದಲ್ಲಿ Improvements to drains SFS-707 and surrounding area in ward no-03 ಕಾಮಗಾರಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ವಯ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಪ್ರಸ್ತಾಪಿತ ಕಾಮಗಾರಿಯನ್ನು ಇತರೆ ರಾಜ್ಯ ಸರ್ಕಾರದ/ ಕೇಂದ್ರ ಸರ್ಕಾರ/ಪಾಲಿಕೆಯ ಯಾವುದೇ ಅನುದಾನದಲ್ಲಿ ಕೈಗೆತ್ತಿಕೊಂಡಿರುವುದಿಲ್ಲವೆಂದು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ದೃಢೀಕರಿಸಿದ್ದು, ಕಾಮಗಾರಿ ಸ್ಥಳದ GEO stamped photo ಲಗತ್ತಿಸಿದ್ದು, ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಕಡತ ಮಂಡಿಸಿದ್ದು, ಮಾನ್ಯ ಆಯುಕ್ತರ ಅಧಿಕಾರಿ ಪ್ರತ್ಯಾಯೋಜನೆ ಸಡವಳಿಗಳ ದಿನಾಂಕ 25-09-2019ರಂತೆ ಆಡಳಿತಾತ್ಮಕ ಅನುಮೋದನೆ ಯಾಗೂ ತಾಂತ್ರಿಕ ಮಂಜೂರಾತಿ ನೀಡಲು ಕೋರಿರುವುದರಿಂದ ಮಾನ್ಯ ಬಲಯ ಆಯುಕ್ತರು ರವರಿಗೆ ಸಲ್ಲಿಸಲು ಕೋರಿ ಕಡತವನ್ನು ಸಲ್ಲಿಸಿದೆ.

33) ಮುಖ್ಯ ಲೆಕ್ಕಾಧಿಕಾರಿಗಳವರಿಗೆ ಕಂಡಿಕೆ 30 ರಿಂದ 32 ರವರೆಗೆ ವಿವರಿಸಿರುವಂತೆ ಆಡಳಿತಾತ್ಮಕ ಅನುಮೋದನೆಗಾಗಿ ಕಡತ ಮಂಡಿಸಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ

34) ವಿಶೇಷ ಆಯುಕ್ತರು (ಅ ಚ) ಕಂಡಿಕೆ 32 ರಲ್ಲಿ ವಿವರಿಸಿರುವಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಕಡತ ಮಂಡಿಸಿದೆ

35) ಮಾನ್ಯ ಆಯುಕ್ತರು

ಜಂಟಿ ಆಯುಕ್ತರು
ಯಲಹಂಕ ವಲಯ

ಮುಖ್ಯ ಲೆಕ್ಕಾಧಿಕಾರಿಗಳು ಕಛೇರಿ
ಸಂ:/ಕಾ.ಲೆ/..... ದಿನಾಂಕ: 01/10/2020
ಪಾಲಿಕೆಯ ಕೇಂದ್ರ ಕಛೇರಿ, ಬೆಂಗಳೂರು-23

ಪಾಲಿಕೆಯ ಸಂಪೂರ್ಣ (ಕ/ವಿ/ಮಾಗ) 1758 03/10/2020

(36)

ಪಂಕ್ತಿಯ ಸಂಖ್ಯೆ

ಕಡತದ ಸಂಖ್ಯೆ .....

ಟಪ್ಪಣಿಗಳು ಮತ್ತು ಆಜ್ಞೆಗಳು

ಪ್ರಸ್ತಾವನೆಯು, ವಾರ್ಡ್-03ರ ವ್ಯಾಪ್ತಿಯಲ್ಲಿ "Improvements to .. drains at SFS 707 and Surrounding area" ಕಾಮಗಾರಿಗೆ ಮುಖ್ಯ ಅಭಿಯಂತರರು (ಯಲಹಂಕ ವಲಯ) ಮತ್ತು ಜಂಟಿ ಆಯುಕ್ತರು (ಯಲಹಂಕ ವಲಯ) ರವರು ಆಡಳಿತಾತ್ಮಕ ಅನುಮೋದನೆ ಕೋರಿರುವುದಾಗಿರುತ್ತದೆ.

ಈ ಮೇರೆಗೆ ಕಡತವನ್ನು ಪರಿಶೀಲಿಸಲಾಗಿ, ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.76.00ಲಕ್ಷಗಳಿಗೆ Special Development works 2020-2021 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3739 ಅಡಿಯಲ್ಲಿ ಸಂಖ್ಯೆ:003-21-000040 ರಂತೆ ಕಾಮಗಾರಿ ಸಂಕೇತ ಪಡೆದುಕೊಂಡಿದ್ದು, ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿ/ ಧೃಢೀಕರಿಸಿರುತ್ತಾರೆ.

(36)

1) ಕಾಮಗಾರಿ ನಿರ್ವಹಿಸುವ ಸ್ಥಳದ GIS-Geo mapping ಛಾಯಾಚಿತ್ರಗಳು.
2) Road Inventory ದಾಖಲಾತಿಗಳು.
3) ಪ್ರಸ್ತಾಪಿತ ಕಾಮಗಾರಿಯನ್ನು ಯಾವುದೇ ಅನುದಾನದಲ್ಲಿ ಕೈಗೊಂಡಿರುವುದಿಲ್ಲ ಹಾಗೂ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಧೃಢೀಕರಣ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಜಂಟಿ ಆಯುಕ್ತರು (ಯಲಹಂಕ ವಲಯ) ರವರ ಶಿಫಾರಸ್ಸಿನ ಮೇರೆಗೆ ಪ್ರಸ್ತಾಪಿಸಿರುವ ಕಾಮಗಾರಿಗೆ ಈ ಕೆಳಕಂಡ ಷರತ್ತಿಗೋಳಪಟ್ಟು, ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳ ಸಂಖ್ಯೆ:ಚಿ12 (1)ಪಿಆರ್/394/2019-2020, ದಿನಾಂಕ:25-09-2019 ರಂತೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಿದೆ.

1) ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಮುಲಿಅ/ಆಯವ್ಯಯ/-2019-20/ಪಿಆರ್/11/2018-19, ದಿನಾಂಕ:12-06-2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಪಿಆರ್/5287/2019-2020,ದಿನಾಂಕ:05-11-2019 ರಲ್ಲಿನ ಮತ್ತು ಸಂಖ್ಯೆ:ಬಿಬಿಎಂಪಿ/ಆ/ಪಿ.ಆರ್/6166/2019-20 ದಿನಾಂಕ:13-12-2019ರಲ್ಲಿನ ನಿರ್ದೇಶನಗಳನ್ನು / ಪ್ರಕ್ರಿಯೆಗಳನ್ನು ಅನುಸರಿಸಿರುವ ಬಗ್ಗೆ ಧೃಢಪಡಿಸಿಕೊಳ್ಳುವುದು.

(37)

2) ಯಾವುದೇ ಹೆಚ್ಚುವರಿ ಆಂಶಗಳನ್ನು ಒಳಪಡಿಸಿಕೊಳ್ಳದೇ, ಕಾಮಗಾರಿಗೆ ರೂ.97.00 ಲಕ್ಷಗಳಿಗೆ ಜಾಬ್ ಸಂಖ್ಯೆಯನ್ನು ಪಡೆಯಲಾಗಿರುವ ಅನುದಾನದಂತೆ ಕಾಮಗಾರಿಯ ಅವಶ್ಯಕತೆಗೆ ಹಾಗೂ ಅಗತ್ಯಕ್ಕೆ ಅನುಗುಣವಾಗಿ ಚಾಲ್ತಿ ಎಸ್.ಆರ್.ದರಗಳ ಅನ್ವಯ ಕ್ರಮಕೈಗೊಳ್ಳತಕ್ಕದ್ದು.
3) ಕಾಮಗಾರಿಗೂ ಮುನ್ನ ಹಾಗೂ ನಂತರದ Geo-tagged ಛಾಯಾಚಿತ್ರಗಳನ್ನು ಕಡತದಲ್ಲಿ ನಿರ್ವಹಿಸತಕ್ಕದ್ದು.
4) ನಿಯಾಮನುಸಾರ ಪಾರದರ್ಶಕವಾಗಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ Standard Bid Documents and KTPP ಕಾಯ್ದೆರನ್ವಯ ಕ್ರಮಕೈಗೊಳ್ಳತಕ್ಕದ್ದು.

ವಿಶೇಷ ಆಯುಕ್ತರು(ಆಸ್ತಿಗಳು) ಹಾಗೂ
ವಲಯ ಆಯುಕ್ತರು(ಯಲಹಂಕ)

(38)

ಜಂಟಿ ಆಯುಕ್ತರು(ಯಲಹಂಕ)

ಪುಟದ ಸಂಖ್ಯೆ .....

ವಿಷಯ :

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(39)	ಕಂಡಿಕೆ ( ) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2020-21ನೇ ಸಾಲಿನ ಲೆಕ್ಕಶೀರ್ಷಿಕೆ P.3739 Special development works ಅನುದಾನದಡಿ ಮಂಜೂರಾಗಿರುವ ವಾರ್ಡ್ ನಂ:03ರ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳು ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್ ದರಪಟ್ಟಿಯನ್ನು ಅನುಸರಿಸಿ ರೂ.76.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಈಗಾಗಲೇ ಕಾಮಗಾರಿ ಸಂಕೇತ:003-21-000040 ದೊರೆತಿದ್ದು, ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ :ಬಿ12(1) ಪಿ.ಆರ್/394/2019-20 ದಿನಾಂಕ: 25-9-2019 ರಂತೆ ನೀಡಿರುವ ಅಧಿಕಾರದನ್ವಯ ವಲಯ ಆಯುಕ್ತರು (ಯಲಹಂಕ)ರವರು ಕಂಡಿಕೆ(39)ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಅದರಂತೆ ಆಡಳಿತಾತ್ಮಕ ಅನುಮೋದನೆ ಟಿಪ್ಪಣಿಗೆ ಸಹಿ ಮಾಡಿದೆ. ಹಾಗೂ ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಬೇಕಾಗಿರುವುದರಿಂದ ತಾಂತ್ರಿಕ ಮಂಜೂರಾತಿ ನೀಡಲು ತಮ್ಮ ಮುಂದಿನ ಆದೇಶ ಕೋರಿ ಸಲ್ಲಿಸಿದೆ. ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ 27/11/2020
(40)	ಅಧೀಕ್ಷಕ ಅಭಿಯಂತರರು (ಯಲಹಂಕ ವಲಯ)

ಕಡತದ ಸಂಖ್ಯೆ .....

ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (3) ರಲ್ಲಿ ಕಾ.ಪಾ.ಅ ಯಲಹಂಕ ರವರು ಈ ಕೆಳಕಂಡ ಕಾಮಗಾರಿಗಳಿಗೆ ಡಿಟಿಎಸ್ ಅನುಮೋದನೆ ಕೋರಿ ಕಡತವನ್ನು ಸಲ್ಲಿಸಿರುತ್ತಾರೆ. ಟೆಂಡರ್ ಅಹ್ವಾನಿಸುವ / ಕಾಮಗಾರಿ ಕೈಗೊಳ್ಳುವ ಮುನ್ನ ಈ ಕೆಳಕಂಡ ಅಂಶಗಳನ್ನು ಕಾರ್ಯಪಾಲಕ ಅಭಿಯಂತರರು, ಯಲಹಂಕ ರವರು ದೃಢೀಕರಿಸಿಕೊಳ್ಳುವ ಷರತ್ತಿಗೆ ಒಳಪಡಿಸಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	Improvements to drains at SFS 707 & Surrounding area in Ward no 03 (003-21-000040)	76.00

1. ಪ್ರಸ್ತಾಪಿತ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ವಿಶಿಷ್ಠ ವಿವರಣೆ/ ವಿಶಿಷ್ಠತೆ ಸ್ಥಳಕ್ಕೆ ಅನುಗುಣವಾಗಿರುವುದರ ಬಗ್ಗೆ.
2. ಅಂದಾಜು ಪಟ್ಟಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗಳನ್ನು ಅಥವಾ ಕಾಮಗಾರಿಯನ್ನು ಕಳೆದ ಮೂರು ವರ್ಷಗಳಿಂದ ಯಾವುದೇ ಅನುದಾನದಲ್ಲಿ ಅಭಿವೃದ್ಧಿಗೊಳಿಸದೆ ಇರುವುದರ ಬಗ್ಗೆ.
3. ಪ್ರಸುತ್ತ ಉದ್ದೇಶಿಸಿರುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಪೂರಕವಾಗಿ ಈ ಹಿಂದೆ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆ ಅಂಶಗಳ ವಿವರಗಳನ್ನು ರಸ್ತೆ ಇತಿಹಾಸ (Road History ಅನ್ವಯವಾಗುವಂತಿದ್ದರೆ) ಪ್ರಸ್ತಕದಲ್ಲಿ ಕಾಮಗಾರಿಯ ವಿವರಗಳನ್ನು ನಮೂದಿಸಿ ನಿರ್ವಹಿಸಿರುವುದರ ಬಗ್ಗೆ.
4. ಪ್ರಸ್ತಾಪಿತ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ಅನುಪಯುಕ್ತ (Debris) ವಸ್ತುಗಳ ಸಾಗಾಣಿಗೆ ಪೂರಕವಾಗಿ ವಲಯ ವ್ಯಾಪ್ತಿಯ ಅನುಮೋದಿತ (Notified Dumping Yard) ಗೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸುವ ಸ್ಥಳದಿಂದ Dumping Yard ಗೆ ಇರುವ ಅಂತರಕ್ಕೆ ಸಂಬಂಧಿಸಿದಂತೆ Lead Chart ನ್ನು ತಯಾರಿಸಿ ಅನುಮೋದನೆ ಪಡೆದುಕೊಳ್ಳುವ ಬಗ್ಗೆ.
5. Non S.R ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋಜೀದನೆ ಪಡೆದಿರುವ ಬಗ್ಗೆ.
6. ಪ್ರಸ್ತಾಪಿತ ಕಾಮಗಾರಿಗೆ ಸಂಬಂಧಿಸಿದಂತೆ Defect Liability Period ಮುಗಿದಿರುವ ಬಗ್ಗೆ.
7. ತೆರವುಗೊಳಿಸಿರುವ ಉಪಯುಕ್ತ ಸಾಮಾಗ್ರಿಗಳ ಬಗ್ಗೆ MAS ನ ವಹಿಯಲ್ಲಿ ದಾಖಲಿಸುವುದು ಹಾಗೂ ಈ ತರಹದ ಉಪಯುಕ್ತ ಸಾಮಾಗ್ರಿಗಳನ್ನು ಬೇರೆಡೆ ಉಪಯೋಗಿಸಿರುವ (ಮರು ಬಳಕೆ ಮಾಡಿರುವ) ಬಗ್ಗೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ದೃಢೀಕರಿಸಿಕೊಳ್ಳುವುದು.
8. ಅಂದಾಜು ಪಟ್ಟಿಯಲ್ಲಿ ಬಿ.ಎಂ/ ಡಿ.ಬಿ.ಎಂ ಪದರದೊಂದಿಗೆ ಬಿ.ಸಿ ಅಂಶವನ್ನು ಅಳವಡಿಸಿಕೊಂಡಿದಲ್ಲಿ ಐ.ಆರ್.ಸಿ ಚಾಲ್ತಿ ಕೋಡ್‌ನಂತೆ ಪರಿಕ್ಷೆಯನ್ನು ಕೈಗೊಂಡು ರಸ್ತೆಯ ವಿನ್ಯಾಸಕ್ಕೆ (Design Report) ಅನುಮೋದನೆಯನ್ನು ಪಡೆಯುವುದು
9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಮಾನ್ಯ ಆಯುಕ್ತರವರ ದಿನಾಂಕ:02/11/2017ರ ಆಂತರಿಕ ಕಛೇರಿ ಜ್ಞಾಪನೆ ಸಂಖ್ಯೆ:ಆ./ಪಿ.ಆರ್/5054/2017-18 ರಂತೆ ಕ್ರಮವಹಿಸುವುದು.

ಮೇಲೆ ವಿವರಿಸಿರುವ ಅಂಶಗಳ ಬಗ್ಗೆ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ರವರು ದೃಢೀಕರಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿ ಹಾಗೂ ಡಿ.ಟಿ.ಎಸ್. ಅನ್ನು ಅನುಮೋದಿಸಿದೆ.

28/11/2020

ಅಧೀಕ್ಷಕ ಅಭಿಯಂತರರು
ಯಲಹಂಕ ವಲಯ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:– Improvements to Drains at SFS 707 and Surrounding area in Ward No 03 ಎಂಬ ಕಾಮಗಾರಿಯ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/ 09 /2020-21 dated: 29-01-2021.

* * * * *

(43) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2020–21ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ.3739ರ (Special Development Works) ಅನುದಾನದಡಿ ವಾರ್ಡ್ ಸಂಖ್ಯೆ:03ರಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ ಕಾಮಗಾರಿಗಳನ್ನು ಕೈಗೊಂಡು ಅಭಿವೃದ್ಧಿ ಪಡಿಸಲು ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಈಗಾಗಲೇ ಜಾಬ್ ಸಂಖ್ಯೆ 003–21–000040 ರಂತೆ ದೊರೆತಿದ್ದು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ವಿವರ ಈ ಕೆಳಕಂಡಂತಿದೆ.

Sl No	Name of work	Estimate cost Rs in Lakhs
01	Improvements to Drains at SFS 707 and Surrounding area in Ward No 03	76.00
	Total	76.00

(44) ಈ ಮೇಲ್ಕಂಡ ಕಾಮಗಾರಿಗೆ ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಅನುಮೊದನೆ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗೆ 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ರೂ.76.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಮುಖ್ಯ ಅಭಿಯಂತರರು ಯಲಹಂಕ ವಲಯರವರು ಸಂಖ್ಯೆ ಬೃ.ಬೆಂ.ಮ.ಪಾ/ಮು.ಅ/ತಾ.ಮಂ/ಯ.ವ./ಪಿ.ಆರ್/40/2020–21 ದಿನಾಂಕ: 26–11–2020 ರಂತೆ ತಾಂತ್ರಿಕ ಮಂಜೂರಾತಿಯನ್ನು ಮತ್ತು ಕರಡು ಟೆಂಡರ್ ಶೆಡ್ಯೂಲ್ – ಬಿ ಗೆ ಅನುಮೋದನೆ ನೀಡಿರುತ್ತಾರೆ.

(45) ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 29–01–2021 ರಂದು KTPP.Act and KW-4 Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ದಿನಾಂಕ: 30–01–2021 ರಂದು ಪ್ರಕಟಿಸಲಾಗಿರುತ್ತದೆ.

ಟಿಪ್ಪಣಿಗಳು ಮತ್ತು ಆಜ್ಞೆಗಳು

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Improvements to Drains at SFS 707 and Surrounding area in Ward No 03
2	ಅಂದಾಜು ಮೊತ್ತ	ರೂ. 76.00 ಲಕ್ಷಗಳು
3	ಇಂಡೆಂಟ್ ನಂ	BBMP/2020-21 / OW/ Work_ INDENT _46676
3	ಅನುದಾನದ ಯೋಜನೆ ಹೆಸರು	2021ನೇ ಸಾಲಿನ (Special Development Works) ಅನುದಾನದ ಅಭಿವೃದ್ಧಿ ಕಾಮಗಾರಿ.
4	ಲೆಕ್ಕಶೀರ್ಷಿಕೆ	ಪಿ– 3739
5	ಅಡಳಿತಾತ್ಮಕ ಅನುಮೋದನೆ	ವಿಶೇಷ ಆಯುಕ್ತರು (ಆಸ್ತಿಗಳು) ಹಾಗೂ ವಲಯ ಆಯುಕ್ತರು (ಯಲಹಂಕ) ಬಿಬಿಎಂಪಿ ರವರಿಂದ ಪಡೆಯಲಾಗಿದೆ.
6	ತಾಂತ್ರಿಕ ಮಂಜೂರಾತಿ ಮೊತ್ತ	ರೂ.76.00 ಲಕ್ಷಗಳು
7	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ ಬೃ.ಬೆಂ.ಮ.ಪಾ/ಮು.ಅ/ ತಾ.ಮಂ/ ಯ.ವ./ಪಿ.ಆರ್/40/2019–20 ದಿನಾಂಕ. 26–11–2020. ರಂತೆ
8	ಟೆಂಡರ್‌ಗೆ ಇಟ್ಟ ಮೊತ್ತ	ರೂ. 58.01 ಲಕ್ಷಗಳು
9	ಟೆಂಡರ್‌ನ ಪೂರ್ವ ಭಾವಿ ಸಭೆ	08–02–2021ರಂದು ಸಂಜೆ 3.00 ಗಂಟೆಗೆ.
10	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	12-02-2020 upto 16.00 hrs
11	ಅನ್ ಲೈನ್ ಇ – ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	15-02-2021 after 16.00 hrs

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ: 15–02–2021 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1. Sri R SHIVARAM
2. Sri Viswanath K J (KUMBENAHALLY JAVARE GOWDA VISHWANATH)

ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, Sri R SHIVARAM and Sri Viswanath K J (KUMBENAHALLY JAVARE GOWDA VISHWANATH) ಇಬ್ಬರು ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವ ಕಾಮಗಾರಿ ದೃಢೀಕರಣ ಪತ್ರ, ಬ್ಯಾಂಕ್ ಗ್ಯಾರಂಟಿ, ಟರ್ನ್‌ಓವರ್ ಸರ್ಟಿಪೀಕೇಟ್ ಹಾಗೂ ಇತರೆ ಅವಶ್ಯಕವಾಗಿರುವ ಎಲ್ಲಾ ದಾಖಲಾತಿಗಳನ್ನು ಸಂಬಂಧಪಟ್ಟ ಕಛೇರಿಗಳಿಂದ ದೃಢೀಕರಿಸಿಕೊಳ್ಳಲಾಗಿದೆ. KW-4 Standard Tender Document ಅನುಸಾರ ನಿಗದಿಪಡಿಸಿರುವ ಎಲ್ಲಾ ಷರತ್ತುಗಳಂತೆ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುತ್ತಾರೆ. ತಾಂತ್ರಿಕ ಮೌಲ್ಯಮಾಪನದ ವಿವರಗಳು ಮತ್ತು ತುಲನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ.

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(48)	ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ Sri R SHIVARAM and Sri Viswanath K J (KUMBENAHALLY JAVARE GOWDA VISHWANATH) ರವರ ತಾಂತ್ರಿಕ ಬಿಡ್‌ನ್ನು ಅನುಮೋದಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ. 05/05/2021 ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ
(49)	ಮುಖ್ಯ ಅಭಿಯಂತರರು (ಯಲಹಂಕ ವಲಯ) ಮುಖ್ಯ ಅಭಿಯಂತರರು ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
(50)	ಕಾ.ಪಾ.ಅ[ಯ.ವಿ] ಯಲಹಂಕ ವಿಭಾಗದ ವ್ಯಾಪ್ತಿಯ ಸಂಖ್ಯೆ:03ರಲ್ಲಿ 2020-21ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ.3739ರ (Special Development Works) ರಲ್ಲಿ ಮಿಸಲಿಟ್ಟಿರುವ ಅನುದಾನದಡಿ ಸದರಿ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಲು ಒಟ್ಟು ಅಂದಾಜು ಮೊತ್ತ ರೂ.76.00 ಲಕ್ಷಗಳಿಗೆ ದಿನಾಂಕ:29-01-2021 ರಂದು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿರುತ್ತದೆ.
(51)	ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರಾದ Sri R SHIVARAM and Sri Viswanath K J (KUMBENAHALLY JAVARE GOWDA VISHWANATH) ರವರು ಇಬ್ಬರೂ ಭಾಗವಹಿಸಿ ಟೆಂಡರ್‌ನಲ್ಲಿ ನಿಗಧಿಪಡಿಸಿದ ಷರತ್ತುಗಳಂತೆ ಅರ್ಹ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಮುಖ್ಯ ಅಭಿಯಂತರರು ಯಲಹಂಕ ವಲಯರವರು ಕಂಡಿಕೆ(49)ರಲ್ಲಿ ಅನುಮೋದನೆ ನೀಡಿರುತ್ತಾರೆ. ಅದರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರೂ ಬಿಡ್ದುದಾರರ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು.

35/ ಪಲಯ

ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018-19 ರ ಅನುಮೋದಿತ ದರಗಳಿಗೆ ಹೊಲಿಸಿದಾಗ.	ಟೆಂಡರ್ ಗಿಟ್ಟ ಮೊತ್ತ 01-02-2021ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ.	ಗುತ್ತಿಗೆ ದಾರರು ನಮೂದಿ ಸಿರುವ ದರಗಳು	2018-19ನೇ ಸಾಲಿನ ಎಸ್.ಆರ್ ಧರಗಳಿಗೆ ಹೋಲಿಸಿದಾ ಗ ಶೇಕಡ ವಾರು	ದಿನಾಂಕ: 01-02-2021ರ ಪರಿಷ್ಕೃತ ದರಗಳಿಗೆ ಹೋಲಿಸಿದಾ ಗ ಶೇಕಡ	ಷರಾ
01	R SHIVARAM	6784362.21	7206713.97	7123579.10	(+)5.00%	(-)1.15%	
02	Viswanath K J (KUMBENAHALLY JAVARE GOWDA VISHWANATH),			7592556.66	(+)11.91%	(+)5.35%	

ಮೇಲ್ಕಂಡ ಇಬ್ಬರೂ ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲ R SHIVARAM ರವರು ನಮೂದಿಸಿರುವ ರೂ.71,23,579.10ಗಳು ಅತಿ ಕಡಿಮೆ ದರಗಳಾಗಿರುತ್ತದೆ.

ಆದುದರಿಂದ ಗುತ್ತಿಗೆದಾರರಾದ R SHIVARAM ರವರು ನಮೂದಿಸಿರುವ ರೂ.71,23,579.10ಗಳು ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018-19 ಸಾಲಿನ ದರಗಳಿಗೆ ಹಾಗೂ ದಿನಾಂಕ:01-02-2021ರಂತೆ ಪರಿಷ್ಕೃತ ದರಪಟ್ಟಿಗೆ ತುಲನೆ ಮಾಡಿದಾಗ ಶೇಕಡ (-)1.15% ರಷ್ಟು ಕಡಿಮೆಯಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಅರ್ಹ ಗುತ್ತಿಗೆದಾರರಾದ R SHIVARAM ರವರು ನಮೂದಿಸಿರುವ ದರ ರೂ.71,23,579.10 ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ (+)5.00% ರಷ್ಟು ಹೆಚ್ಚಾಗಿದ್ದು, ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ನೀಡಲು ಕೊರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

09/03/2021

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಗುತ್ತಿಗೆದಾರರುಗಳಿಗೆ ದರ ಸಂಧಾನ ನಡೆಸಿ ಆಯ್ಕೆಯ ಮಾಡಿರುವ

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪು.ತಿ.ನೋ

ವಿಷಯ :

ಪುಟದ ಸಂಖ್ಯೆ 10

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ)

(55) ಕಂಡಿಕೆ (54) ರಲ್ಲಿ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಎಲ್-1 ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲು ಸೂಚಿಸಿರುವ ಮೇರೆಗೆ ದಿನಾಂಕ: 09-03-2021 ರಂದು ಗುತ್ತಿಗೆದಾರರಿಗೆ ತಿಳುವಳಿಕೆ ಪತ್ರವನ್ನು ನೀಡಲಾಗಿರುತ್ತದೆ. ಅದರಂತೆ ಗುತ್ತಿಗೆದಾರರು ದಿನಾಂಕ: 10-03-2021 ರಂದು ಈ ಕಛೇರಿಗೆ ಪತ್ರ ನೀಡಿ 2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಅನುಮೋದಿತ ದರಗಳ ಮೊತ್ತಕ್ಕೆ ಶೇಕಡ (+)4.65% ರಷ್ಟು ಹೆಚ್ಚಿನ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

ಗುತ್ತಿಗೆದಾರರ ಹೆಸರು	Before Negotiation			After Negotiation		
	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್.ಧರಗಳಿಗೆ ಹೋಲಿಸಿದಾಗ ಶೇಕಡ ವಾರು	ದಿನಾಂಕ: 01-02-2021ರ ಪಂಷ್ಟತ ದರಗಳಿಗೆ ಹೋಲಿಸಿದಾಗ ಶೇಕಡ	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್ ಧರಗಳಿಗೆ ಹೋಲಿಸಿದಾಗ ಶೇಕಡ ವಾರು	ದಿನಾಂಕ: 01-02-2021ರ ಪಂಷ್ಟತ ದರಗಳಿಗೆ ಹೋಲಿಸಿದಾಗ ಶೇಕಡ
R SHIVARAM	7123579.10	(+)5.00%	(-)1.15%	7099835.06	(+)4.65%	(-)1.48%

(56) ಈ ಮೇಲ್ಕಂಡ ವಿವರಗಳಂತೆ ದರಸಂದಾನದ ಮೊತ್ತ ರೂ.70,99,835.06 ಗಳಿಗೆ ಅನುಮೋದನೆ ನೀಡಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು 10/03/2021
ಯಲಹಂಕ ವಿಭಾಗ

(57) ಮುಖ್ಯ ಅಭಿಯಂತರರು (ಯಲಹಂಕ ವಲಯ)